ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಅಧ್ಯಕ್ಷರೆ, ೧೯೮೮-೮೯ನೇ ಸಾಲಿನಲ್ಲಿ ೭ ಜಿಲ್ಲೆಗಳಿಗೆ ೭೩ ಕೇಂದ್ರಗಳನ್ನು ಕೊಟ್ಟಿದ್ದೀರಿ. ಈ ಏಳು ಜಿಲ್ಲೆಗಳಿಗೆ ಬೇಗನೆ ಅನುದಾನವನ್ನು ಕೊಟ್ಟು ಪ್ರಾರಂಭ ಮಾಡುತ್ತೀರಾ ಹೇಗೆ ? ಅಂದರೆ ಈ ಬಗ್ಗೆ ಆದಷ್ಟು ಜಾಗ್ರತೆ ಕಾರ್ಯಗತ ಆಗುವ ಹಾಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಏಳು ಜಿಲ್ಲೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಬೇಕು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಏಳು ಜಿಲ್ಲಾಪರಿಷತ್ತುಗಳು ಅವರ ಡಿಫ್ಟಕ್ಟ್ ಪ್ಲಾನ್ ನಲ್ಲಿ ಈ ಡಿಸ್ಪೆನ್ಸರಿಗಳನ್ನು ಅಪ್‌ಗ್ರೇಡ್‌ಮಾಡಲು ಪ್ರೊಪೋಸಲ್ಸ್‌ನ್ನು ಕಳುಹಿಸಲಾಗಿದೆ. For starting Veterinary Dispensaries, ಮೈಸೂರು ಜಿಲ್ಲೆಗೆ ೪ ಲಕ್ಷ ರೂ. ಗಳನ್ನು ಕೊಡಲಾಗಿದೆ. ಇವರ ಪ್ರೊಪೋಸಲ್ ಇರುವುದು ಆರ್‌ವಿಡಿಎಸ್ ಮಾಡಬೇಕೆಂದು. ಉತ್ತರ ಕನ್ನಡ ಜಿಲ್ಲೆಗೆ ೧ ಲಕ್ಷ ೧೦ ಸಾವಿರ ಕೊಡಲಾಗಿದ್ದು ಅವರ ಪ್ರೊಪೋಸಲ್ ಕೊಟ್ಟಿರುವುದು Proposal for one RVDS, no upgrading. ಅಪ್‌ಗ್ರೇಡ್ ಯಾವುದನ್ನೂ ಮಾಡಿಲ್ಲ. ರಾಯಚೂರು ಜಿಲ್ಲೆಗೆ ಹನ್ನೊಂದೂವರೆ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಆ ಬಗ್ಗೆ ೧೬ಆರ್‌ವಿಡಿಎಸ್ ಪ್ರೊಪೋಸ್ ಮಾಡಿದ್ದಾರೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ತಾವುಗಳು ಜಿಲ್ಲಾವಾರು ಮಾಹಿತಿಗಳನ್ನು ಹೇಳುತ್ತಾ ಇದ್ದೀರಿ. ಮೈಸೂರು, ಉತ್ತರ ಕನ್ನಡ, ರಾಯಚೂರು ಮುಂತಾಗಿ ಜಿಲ್ಲೆಗಳಿಗೆ ಎಷ್ಟೆಷ್ಟು ಅನುದಾನವನ್ನು ಇಟ್ಟಿದ್ದೀರಿ ಎಂದು ಹೇಳಬೇಕು. ತಾವು ಹೇಳುತ್ತಾ ಇರುವುದನ್ನು ಮುಂದುವರಿಸಿ ಹೇಳಿ. ರಾಯಚೂರು, ಬೀದರ್, ಧಾರವಾಡ, ಗುಲ್ಬರ್ಗ ಜಿಲ್ಲೆಗಳಿಗೆ ಜಿಲ್ಲಾವಾರು ಅನುದಾನ ಎಷ್ಟು ಕೊಡುತ್ತೀರಿ ಎಂದು ಹೇಳಬೇಕು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ಎಂದು ಹೇಳುವುದಾದರೆ ಬೆಂಗಳೂರು ಜಿಲ್ಲೆಗೆ ೫ ಲಕ್ಷ ೬೪ ಸಾವಿರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ೬೨ ಸಾವಿರ, ಚಿತ್ರದುರ್ಗಕ್ಕೆ ೩ ಲಕ್ಷ ೪೨ ಸಾವಿರ, ಕೋಲಾರಕ್ಕೆ ೩ ಲಕ್ಷ ೨೫ ಸಾವಿರ, ಶಿವಮೊಗ್ಗಕ್ಕೆ ೨ಲಕ್ಷ ೫೬ ಸಾವಿರ, ತುಮಕೂರು ಜಿಲ್ಲೆಗೆ ೨,೦೯ ಲಕ್ಷ ಮೈಸೂರಿಗೆ ೫ ಲಕ್ಷ ಚಿಕ್ಕಮಗಳೂರಿಗೆ ೬೪ ಸಾವಿರ, ಹಾಸನಕ್ಕೆ ೨೫ ಸಾವಿರ, ಮಂಡ್ಯಕ್ಕೆ ೧೫ ಸಾವಿರ, ಬೆಳಗಾಮ್‌ಗೆ ೬೦ ಸಾವಿರ, ಧಾರವಾಡಕ್ಕೆ ೧೧ ಲಕ್ಷ ಉತ್ತರ ಕನ್ನಡ ಜಿಲ್ಲೆಗೆ ೧ ಲಕ್ಷ ೧೦ ಸಾವಿರ, ಗುಲ್ಬರ್ಗ ಜಿಲ್ಲೆಗೆ ೧ ಲಕ್ಷ ೯೪ ಸಾವಿರ, ಬೀದರ್‌ಗೆ ೫ ಲಕ್ಷ ೨೦ ಸಾವಿರ ಹೀಗೆ — ಒಟ್ಟು ೬೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳು

೮೮೦ (೨೩೧೨) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಸತಿ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮೀಣ ಪಶುವೈದ್ಯಾಲಯಗಳ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಎಷ್ಟು ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಕೊಂಡ ಕ್ರಮಗಳೇನು?

ಇ) ಈ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು?

ಈ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ೫೬ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಆ) ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಪರಿಷತ್‌ನವರೇ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿ ಪಶುವೈದ್ಯರ ಹುದ್ದೆಗಳು ಖಾಲಿ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಗ್ರಾಮೀಣ ಪಶುವೈದ್ಯಶಾಲೆಗಳನ್ನು ಸ್ಥಾಪಿಸಬೇಕೆಂದು ಜಿಲ್ಲಾಪರಿಷತ್ತಿನಿಂದ ಮನವಿ ಬಂದಿದೆ. ಪಶುವೈದ್ಯಶಾಲೆಗಳನ್ನು ಆರಂಭಿಸಲು ಬೇಕಾದ ಸಿಬ್ಬಂದಿ ನೇಮಿಸುವ ಪದ್ಧತಿ ಈಗ ಸರ್ಕಾರದಲ್ಲೇ ಇದೆ, ಇದರ ಜವಾಬ್ದಾರಿ ಜಿಲ್ಲಾಪರಿಷತ್ತಿನ ದಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪಶುವೈದ್ಯಶಾಲೆಗಳನ್ನು ಆರಂಭಿಸಲು ಕ್ರಮ ಕೈಗೊಳ್ಳುತ್ತೀರಿ ? ಮಂಜೂರಾತಿ ತಮ್ಮಿಂದ ದೊರಕುತ್ತದೆಯೇ ? ಎಷ್ಟು ಗ್ರಾಂಟ್ ಇನ್ನು ಮುಂದೆ ಸಿಗುತ್ತದೆ ಎಂಬುದನ್ನು ತಾವು ತಿಳಿಸಬೇಕು, ಸುಮ್ಮನೆ ಜಿಲ್ಲಾಪರಿಷತ್ತಿನ ಮೇಲೆ ಗೂಬೆ ಕೂರಿಸುವ ಕೆಲಸ ಬೇಡ.

ಶ್ರೀ ಮಹಮದ್ ಮೊಯಿನುದ್ದೀನ್.—ಈಗಾಗಲೇ ನಾನು ಹೇಳಿದಂತೆ any opening of new dispensaries, entirely left to the Zilla Parishads. ಉತ್ತರ ಕನ್ನಡಕ್ಕೆ ೧ ಲಕ್ಷ ೧೦ ಸಾವಿರ ಬಿಡುಗಡೆ ಮಾಡಿದ್ದೇವೆ. ಹೊಸ ರೂರಲ್ ವೆಟರ್ನಿಟಿ ಹಾಸ್ಪಿಟಲ್‌ಗಾಗಿ ೮೮-೮೯ರ ಪ್ಲಾನ್‌ನಲ್ಲೂ ಸೇರಿಕೊಂಡಿಲ್ಲ ಮತ್ತು ಪ್ರೊಪೋಸಲ್ಸೂ ಜಿಲ್ಲಾಪರಿಷತ್‌ನಿಂದ ಸಹ ಸರ್ಕಾರಕ್ಕೆ ಬಂದಿಲ್ಲ.

ಹೊಸನಗರಕ್ಕೆ ವಿದ್ಯುಚ್ಚಕ್ತಿ ಸಬ್‌ಡಿವಿಜನ್ ಮಂಜೂರು ಮಾಡುವುದು

೮೮೧ (೫೬೯) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹೊಸನಗರಕ್ಕೆ ವಿದ್ಯುಚಕ್ತಿ ಸಬ್‌ಡಿವಿಜನ್ ಮಂಜೂರು ಮಾಡದಿರಲು ಕಾರಣವೇನು?

ಆ) ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಆ) ೧೯೮೮ರಲ್ಲಿ ಈ ವಿಷಯವನ್ನು ಪರಿಶೀಲಿಸಿ ಹೊಸ ನಗರದಲ್ಲಿ ಸಬ್‌ಡಿವಿಜನ್ ಸ್ಥಾಪಿಸಲು ಹಾಲಿ ಸಾಕಷ್ಟು ಗ್ರಾಹಕರ ಸಂಖ್ಯೆ (ವರ್ಕ್‌ಲೋಡು) ಇಲ್ಲದಿರುವುದರಿಂದ ಗ್ರಾಹಕರ ಸಂಖ್ಯೆ ಹೆಚ್ಚಾದ ನಂತರ ಮುಂದೆ ಪರಿಶೀಲಿಸಬಹುದೆಂದು ತೀರ್ಮಾನ ಕೈಗೊಳ್ಳಲಾಗಿತ್ತು.

ಆ) ರಾಜ್ಯದಲ್ಲಿ ವಿಭಾಗ, ಉಪವಿಭಾಗ, ಶಾಖೆಗಳ ಪುನರ್‌ರಚನೆಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಮಂಡಳಿಯ ಆರ್ಥಿಕ ಸ್ಥಿತಿ ಗಮನದಲ್ಲಿಟ್ಟುಕೊಂಡು ಕನಿಷ್ಟ ಅಗತ್ಯ ಪೂರೈಸಲು ಯತ್ನಿಸಲಾಗುತ್ತಿದೆ. ಆದ್ದರಿಂದ ಹೊಸನಗರದಲ್ಲಿ ಉಪವಿಭಾಗ ಸ್ಥಾಪಿಸುವುದನ್ನು ಸೂಕ್ತ ಸಮಯದಲ್ಲಿ ಕೈಗೊಳ್ಳಲಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ವರ್ಕ್ ಲೋಡ್ ಕಡಿಮೆ ಇದೆ ಆದಕ್ಕೋಸ್ಕರ ಸಬ್‌ಡಿವಿಷನ್‌ನ್ನು ಸ್ಥಾಪನೆ ಮಾಡಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಊರಿಗೆ ಬಂದಾಗ ಹೇಳಿದ್ದೇನೆ. ಅಲ್ಲಿ ವರ್ಕ್‌ಲೋಡ್ ಜಾಸ್ತಿಯಾಗಿರುವುದರಿಂದ ಪಕ್ಕದಲ್ಲಿರುವ ತೀರ್ಥಹಳ್ಳಿಗೆ ವರ್ಕ್‌ಲೋಡ್ ಕೊಟ್ಟಿದ್ದಾರೆ, ಅಲ್ಲಿ ಚಕ್ರಾ ವರಾಹಿ ಮುಂತಾದ ಯೋಜನೆಗಳೆಲ್ಲಾ ಅಲ್ಲಿ ಬಂದಿದ್ದು ಆ ಯೋಜನೆಯಲ್ಲಿ ಬರತಕ್ಕಂತಹ ಎಲ್ಲಾ ಕೆಲಸಗಳನ್ನು ವರ್ಕ್‌ಲೋಡ್‌ಅನ್ನು ತೀರ್ಥಹಳ್ಳಿ ಸಬ್ ಡಿವಿಜನ್ ಮರ್ಜ್ ಮಾಡಿದ್ದಾರೆ. ಹೊಸನಗರ ತಾಲ್ಲೂಕಿನಲ್ಲಿ ಮಾಡಬೇಕೆಂದು ಹೇಳಿದ್ದಾರೆ, ಇಲ್ಲಿ ಕೊಟ್ಟಿರುವ ಮಾಹಿತಿ ಸರಿಯಿಲ್ಲ. ಹೊಸನಗರ ತಾಲ್ಲೂಕು ೧೫೦ ಕಿಲೋ ಮೀಟರ್ ವಿಸ್ತೀರ್ಣ ಇದ್ದು, ಅಲ್ಲಿ ಅಲ್ಲಿ ಚಕ್ರಾ, ವರಾಹಿ, ಸಾವೇಹಕ್ಕಲು, ಲಿಂಗನಮಕ್ಕಿ ಡ್ಯಾಂ—ಎಲ್ಲಾ ಯೋಜನೆಗಳು ಅಲ್ಲಿ ನಡೆಯುತ್ತಿರುವುದರಿಂದ ಇಡೀ ರಾಜ್ಯಕ್ಕೆ ಬೆಳಕು ಕೊಡತಕ್ಕಂತಹ ಸ್ಥಳದಲ್ಲಿ ಸಬ್ ಡಿವಿಜನ್ ಮಾಡಲು ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂಬುದು ನನ್ನ ಅಭಿಪ್ರಾಯ ; ಇದಕ್ಕೆ ಮಾನ್ಯ ಮಂತ್ರಿಗಳ ಉತ್ತರವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೮ರಲ್ಲಿ ಸರ್ವೆ ಮಾಡಿದ್ದಾರೆ. ಅಲ್ಲಿ ಸಬ್ ಡಿವಿಜನ್ ಸ್ಥಾಪನೆ ಮಾಡಬೇಕಾದಂತಹ ಅಗತ್ಯ ಇದೆಯೋ ಇಲ್ಲವೋ ಎಂಬ ಬಗ್ಗೆ ಹೇಳಬೇಕೆಂದರೆ ಅಲ್ಲಿ ವರ್ಕ್‌ಲೋಡ್ ಕಮ್ಮಿ ಇದೆಯೆಂದು ಇದನ್ನು ಮಾಡುವ ಅವಶ್ಯಕತೆ ಇಲ್ಲವೆಂದು ಕೈ ಬಿಟ್ಟಿದ್ದಾರೆ ಈ ಮಧ್ಯೆ ಚಕ್ರಾ